5. ಸದರೀ ಮೇರೆಗೆ ಮಾಯಿದಾ ಅತಿಕ್ರಮಿಸಿದಂಥಾ ಸಾಮಾನುಗಳು ಪುನಹ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಅದಂರಿದ ಯೀನಾದರೂ ಜಾಸ್ತೀ ಹುಟ್ಟುವಳ್ಳೀ ಆದಲ್ಲಿ ಅದನ್ನ ಮ್ಯುನಸಿಫಲ್ ಬಾಬಿಗೆ ತೀರಿಸಿಕೊಳ್ಳೋಣವಾಗುತ್ತೆ.

6. ಹರಾಜುದಾರನು 1ನೇ ಕಲಂನಲ್ಲಿ ಕಂಡ ಮೇರಿಗೆ ತೀರವಣೀ ಹಣವನ್ನು ಮತ್ತು ಬಾಕೀ ಮೊಬಲಗನ್ನು ಹಾಜರ್ಮಾಡುವದಕ್ಕೆ ತಪ್ಪಿದ ಪಕ್ಷಕ್ಕೆ ಸಾಮಾನುಗಳು ಪುನಹಾ ಹರಾಜ್ ಮಾಡಿಸಲ್ಪಟ್ಟೀತು. ಆ ಮೇರಿಗೆ ಹರಾಜು ಮಾಡಿಸುವದರ ಲಾಗವಡು ಮತ್ತು ಅದರಿಂದ ಸಂಭವಿಸುವ ನಷ್ಟ ಯಿವುಗಳಿಗೆ ಅವ್ವಲ್ ಹರಾಜುದಾರನ್ನ ಗುರಿಮಾಡಲಾಧೀತು.

ಷ ರಾ ,

ಮಾರೀರ್ಸ ಬಂಗ್ಲೇ ಯಂಬವದು ಇನ್ನು ಸಾಬೀತು ಇದೆ, ಅದರ ಸಾಮಾನುಗಳಳ್ಳ ಹ್ಯಾಗೆ ಇದೆಯೊ ಅದೇ ಸ್ಥಿತಿಯಲ್ಲೀ ಹರಾಜು ಮಾಡಲ್ಪಡುತ್ತೆ. ಹಳೇ ಅರಮನೆಯ ಸಾಮಾನುಗಳು ಮಾತ್ರ ಕೆಳಗೆ ಇರಿಸಲ್ಪಟಿವೆ ಹರಾಜುದಾರನು ಅವುಗಳನ್ನ ಸಾಗಿಸುವದು ಮಾತ್ರ ವಾಗಿಧೆ.

ರಾಘವೇಂದ್ರರಾವ್,
ಪೈಸ್ ಪೆಸಿಡೆಂಡ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 4ನೇ ಜನವರೀ 1884.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ಯ 1884ನೇ ಇಸವಿ ಏಪ್ರೆಲ್ ಗುರ್ತೇ ತಾರೀಖು ಮೊದಲು 1885ನೇ ಮಾರ್ಚೀ 31ನೇ ತಾರೀಖುವರಿಗೆ ಎರಡು ದಿನಗಳೂ ಸೇರಿ ಬೇಕಾದ ಆಹಾರ ವಗ್ಯೆರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸಾಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗಾ ಜೈಲ್ ಸೂಪರ್ಟಿಂಡೆಂಟರವರು, ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್ಲವರಿಂದ ಕಾಯುಂ ಮಾಡಲ್ಪಡಲಿಕ್ಕೆ ಗುರಿಯಾಗಿ ಸ್ಯ 1884ನೇ ಇಸವಿ ಮಾರ್ಚೀ 1ನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. "ಶಿವಮೊಗ್ಗಾ ಜೈಲ್‌ಗಾಗಿ ಆಹಾರ ಪದಾರ್ಥಗಳ ಸಾಬರಾಯಿ ಬಗ್ಯೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡ ತಕ್ಕದ್ದು,

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನೀಗೆ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟ್ಯವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಜೈಲ್ ಸೂಪರ್ಟಿಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

				ರೂ. ಆ. ಪೈ.
ನೇಟಿವ್ ಕೂಲಿಯವರಾದ ಗಂಡಸರು		A ಕ್ಲಾಸ್	.. ..	
ಡಿಟೋ	ಡಿಟೋ	B ,,	.. ..	
ಡಿಟೋ	ಡಿಟೋ	C ,,	.. ..	
ಡಿಟೋ	ಹುಡುಗರಾದ ಖೈದೀರು		.. ..	
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು D ಕ್ಲಾಸ್				
ಯೂರೋಪಿಯರ್ಗಳು ವ ಈಸ್ಟ್ ಇಂಡಿಯರ್ಗಳು			.. ..	

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ ಅಸಪತಿ) ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂಣ್ಣೆ, ಲಾಂದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಸ್ತಾನ ಮಾಡಲಿಕ್ಕೆ ಕೀಗೇಕಾಯಿ, ತಮಾಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಗೂಡೆ ಬಾಸೆ ಮಾಡಲಿಕ್ಕೆ ಬಿದುರು, ಮಡಿಕ್ಕೆ ಸುಡುವದಕ್ಕೆ ಸಾದೆ, ಹೆಣ್ಣು ಖೈದೀರ ಮಕ್ಕಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗ್ಯೆರೇ ಪದಾರ್ಥಗಳು, ಜೊಗೆ ಹಾಕುವದಕ್ಕೆ ಗಂಧಕ, ಚವಳುಮಂಣ್ಣು, ಮತ್ತು ಖೈದಿಗಳಿಗೆ ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆ ತಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್‌ಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವ್ಯೆಶಿಸಿಕೊಂಡಿರುತ್ತಾರೆ, ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮುಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕ್ಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 1,000 ರೂಪಾಯಿಗಳ ಮೊಬಲಗಿಗೆ ಜಾಮೀನನ್ನು ತನ್ನ ದರಖಾಸ್ತು ಮುಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಬಂದು ವಾರದ ಒಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರಿ ಡಿಪಾಜಿಟ್ ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರಿಂದ ಮೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ, ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಗೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಪಿಕ್ಕಿಗೆ ಕೊಡಲ್ಪಡಬಹುದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತೆರದ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮೀರದ ಬಂದು ಜುರ್ಮಾನೆಯು ಹಾಕಲ್ಪಡುವದು, ಬಾರ್ ಬಾರ್ ಆ ಮೇರೆ ತಪ್ಪಿದಲ್ಲಿ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನು ಮೊಬಲಗು ಸರ್ಕಾರಕ್ಕೆ ಜೇರಿಸಿಕೊಳ್ಳಲ್ಪಡುವದು.

14. ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗಾ ಜೈಲ್ ಸೂಪರ್‌ಟೆಂಟೆಂಟರವರ ನಿರ್ಣಯವೇ ಅಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ಉಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಒದ್ದನಾಗಿರತಕ್ಕದ್ದು.

16. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್‌ಟೆರಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

17. ಅಡಿಗೆ ಮಾಡುವಲ್ಲಿ ಮಡಿಕೆಗಳು ಪಡದು ಹೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲುಕ್ಸಾನನ್ನು ಕಂಟ್ರಾಕ್ಟುದಾರನೇ ಕಟ್ಟಿಕೊಡತಕ್ಕದ್ದು.

18. ಹಾಲೀ ಶಿವಮೊಗ್ಗಾ ಜೈಲ್‌ನಲ್ಲಿ 250 ಮಂದಿ ಖೈದೀರಿದ್ದಾರೆ, ಈ ಸಾಲ್‌ನಲ್ಲಿ ಪುಮಾರ್ 300ರ ವರಿಗೆ ಜಾಸ್ತೀಯಾಗಬಹುದಾಗಿ ಅಂದಾಜ್ ಇರುತ್ತೆ.

19. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮಕ್ಕುಮಿನ ಮೈಸೂರು ಗೆಜೆಟ್ಟಿನಿಂದಾಗಲಿ, ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರನ್ನು ಕೇಳಿ ಆಗಲಿ ತಿಳದುಕೊಳ್ಳಬಹುದು.

ಪಿ. ಪಂಚನಾಥರಾವ್,
ಜೈಲ್ ಸೂಪರ್‌ಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

1883ನೇ ಮಿಸಲೇನಿಯಸ್ ಕೇಸ್ ನಂಬರ್ 110.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ವಿಷಯದಲ್ಲಿಯೂ ಮತ್ತು ಬೇಲೂರ ತಾಲ್ಲೂಕು ಮಲ್ಲಾಪುರದ ಮಠದಲ್ಲಿ ಯಿರುವ ಮಲ್ಲಿಕಾರ್ಜುನ ವಡೇರ ಅರ್ಜೀ ವಿಷಯದಲ್ಲಿಯು ಸಹ.

ಮೇಲಿಕಂಡ ಅರ್ಜೀದಾರ 1883ನೇ ಡಿಸಂಬರ್ 20ನೇ ತಾರೀಖಿನಲ್ಲಿ ಈ ಕೋರ್ಟಿಗೆ ಕೊಟ್ಟ ಅರ್ಜಿಯು ಸಿವಿಲ್ ಪ್ರೊಸಿಜ್ಯೂರ್ ಕೋಡ್ 20ನೇ ಅಧ್ಯಾಯದಲ್ಲಿ ನಮೂದಾಗುವ ಉದಹರಣೆಗಳ ಪ್ರಯೋಜನವನ್ನು ಹೊಂದುವದರ ಮೂಲಕ ಸದರೀ ಕೋಡ್ 351ನೇ ಪ್ರಕರಣ ಪ್ರಕಾರ ದಿವಾಳೀಯಾದವರೆಂಬದಾಗಿ ಅಪ್ಪಣೇ ಆಗಬೇಕೆಂದು ಕೋರಿಕೊಂಡಿರುವದರಿಂದ, ಸ್ಯ 1884ನೇ ಜನವರೀ 30ನೇ ದಿನ 11ಘಂಟೆಗೆ ಸದರೀ ಅರ್ಜೀ ವಿಷಯದಲ್ಲಿ ದರಿಯಾಫ್ತ್ ಮಾಡುವದರಿಂದ ಆ ಕಾಲದಲ್ಲಿ ಅರ್ಜೀದಾರ್ರು ಕೋರ್ಟು ರೂಬರೂ ಹಾಜ